ಸಿ.ಸಿ..ನಂ.241-2022

ಪಿ.ಡಬ್ಲ್ಯೂ-1

ದಿನಾಂಕ.13-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೆ ಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ವಿ.ಎಸ್ ವಕೀಲರಿಂದಃ**

1. ಬೇರೆ ಬೇರೆ ಶಾಖೆಗಳಿಂದ ಬಂದ ಲೋನ ಕಾಗತ ಪತ್ರಗಳು ಎಲ್ಲಿ ಪರಿಶೀಲನೆ ಮಾಡಲಾಗುತ್ತದೆ ಎಂದರೆ ಅದನ್ನು ಸಂಬಂಧಿತ ಶಾಖೆಯಲ್ಲಿ ಹಾಗೂ ಮುಖ್ಯ ಶಾಖೆಯಲ್ಲಿ ಪರಿಶೀಲನೆ ಮಾಡಲಾಗುತ್ತದೆ ಈ ಸಾಲಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಸಾಲ ಕೊಟ್ಟ ಶಾಖೆಯಲ್ಲಿ ಪರಿಶೀಲನೆ ಮಾಡಲಾಗುತ್ತದೆ . ಸದ್ರಿ ಪರಿಶೀಲನೆಯನ್ನು ಶಾಖಾಧಿಕಾರಿಗಳು ಹಾಗೂ CAO ರವರು ಮಾಡುತ್ತಾರೆ. ನಿಮ್ಮ ಬೈಲಾ ಪ್ರಕಾರ ಒಬ್ಬ ವ್ಯಕ್ತಿಗೆ 2 ಶಾಖೆಗಳಲಿಲ ಸಾಲ ಕೊಡಬಹುದಾ ಎಂದರೆ ಕೊಡಬಹುದು. ಈ ರೀತಿಯಾಗಿ 2 ಶಾಖೆಗಳಲ್ಲಿ ಸಾಲ ಕೊಡುವಾಗ ಬೈಲಾ ಪ್ರಕಾರ ಯಾವ ನಿಯಮಗಳನ್ನು ಪಾಲಿಸಬೇಕು ಎಂದರೆ ಠರಾವು ಮೂಲಕ ಮಾಡಲಾಗುತ್ತದೆ . ಆ ರೀತಿಯ ಬೈಲಾವನ್ನು ಹಾಜರು ಪಡಿಸಲು ನಿಮಗೆ ಯಾವುದೇ ತೊಂದರೇ ಇಲ್ಲ ಎಂದರೆ ಸರಿ . 2 ಶಾಖೆಗಳಲ್ಲಿನ ಸಾಲದ ದಾಖಾಲಾತಿಗಳಲ್ಲಿ ತಪ್ಪಾಗಿ ನಮೂದು ಆಗಿದ್ದರೆ ಯಾವ ರೀತಿಯ ಕ್ರಮ ಕೈಗೊಳ್ಳುತ್ತೀರಿ ಎಂದರೆ ನಮ್ಮ ತಪ್ಪಾಗಿದ್ದರೆ ಅದನ್ನು ಸರಿಯಾಗಿ ಮಾಡಿಕೊಡುತ್ತೇವೆ ಅವರ ಕಡೆಯಿಂದ ತಪ್ಪಾಗಿದ್ದರೆ ಅವರಿಗೆ ತಿಳಿಸುತ್ತೇವೆ . ಅವರು ಬರದೆ ಇದ್ದರೆ ಅದನ್ನು ಹಾಗೆ ಇಡುತ್ತೇವೆ . ಈ ಪ್ರಕರಣಗಳಲ್ಲಿನ ದಾಖಲಾತಿಗಳನ್ನು ಯಾರು ಪರಿಶೀಲನೆ ಮಾಡುತ್ತಾರೆ ಎಂದರೆ ಅವರಿಗೆ ಸಾಲ ವನ್ನು ಕೊಡುವಾಗ ಯಾರು ಅಧಿಕಾರದಲ್ಲಿ ಇರುತ್ತಾರೆ ಅವರು ಪರಿಶೀಲನೆ ಮಾಡಿಕೊಡುತ್ತಾರೆ . ಈ ಆರೋಪಿಯಮೇಲೆ 2 ಪ್ರಕರಣಗಳು ಇರುತ್ತದೆ ಎಂದರೆ ಸರಿ . ಈ 2 ಪ್ರಕರಣಗಳು ಪ್ರತ್ಯೇಕವಾದ 2 ಶಾಖೆಗಳಿಗೆ ಸಂಬಂಧಿಸಿದ ಪ್ರಕರಣಗಳು ಆಗಿರುತ್ತದೆ ಎಂದರೆ ಸರಿ . ನಾನು ಸಾಲದ ದಾಖಲಾತಿಗಳನ್ನು ಪರಿಶೀಲನೆ ಮಾಡಿಕೊಂಡು ಇಲ್ಲಿಗೆ ಬಂದಿರುತ್ತೇನೆ. ನಾನು ಹಾಜರು ಪಡಿಸಿದ ಸಾಲದ ದಾಖಲಾತಿಗಳಲ್ಲಿ ಏನು ತಪ್ಪು ಕೂಡ ಇರುವುದಿಲ್ಲ. ಆ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲಾತಿಗಳನ್ನು ಈಗ ನಿಮಗೆ ತೋರಿಸಿದರೆ ಗುರುತಿಸಲು ಆಗುತ್ತದೆಯಾ

ಎಂದರೆ ನನಗೆ ಗೊತ್ತಾಗುವುದಿಲ್ಲ. ಆ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳು ನಿಮ್ಮ ಸೊಸೈಟಿ ಯಲ್ಲಿ ಇರುತ್ತದೆಯಾ ಎಂದರೆ ಹೌದು . ಆ ಪ್ರಕರಣದ ದಾಖಲಾತಿಗಳನ್ನು ನೋಡಿಕೊಂಡು ಪರಿಶೀಲನೆ ಮಾಡಿಕೊಂಡು ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಬಹುದು ಎಂದರೆ ಸರಿ . ಆ ಪ್ರಕರಣ ದ ದಾಖಲಾತಿಗಳನ್ನು ಈಗ ಗುರುತಿಸಲು ಬರುವುದಿಲ್ಲ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ಆ ಪ್ರಕರಣಗಳನ್ನು ಆರೋಪಿತನ ವಿರುದ್ದ ನೀವು ಸೃಷ್ಟಿ ಮಾಡಿಕೊಂಡಿರುತ್ತೀರಿ ಆ ಕಾರಣದಿಂದ ಆ ಪ್ರಕರಣ ದಾಖಲಾತಿಗಳು ನೀವು ಗೊತ್ತಿಲ್ಲ ಎಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ನ್ಯಾಯಾಲಯವು ಸಮಯಾವಕಾಶ ಕೊಟ್ಟರೆ ಆ ಪ್ರಕರಣದ ದಾಖಲಾತಿಗಳನ್ನು ನೋಡಿಕೊಂಡು ಬಂದು ಸಾಕ್ಷ್ಯ ನುಡಿಯಲು ನಿಮಗೆ ತೊಂದರೆ ಇಲ್ಲ ಎಂದರೆ ಅದು ಆ ಪ್ರಕರಣದ್ದು ಆ ಪ್ರಕರಣದ ಸಾಕ್ಷ್ಯ ಇರುವಾಗ ನಾನು ಅದಕ್ಕೆ ಸಂಬಂಧಿಸಿದ ದಾಖಾಲತಿಗಳನ್ನು ನೋಡಿ ಕೊಂಡು ಬಂದು ಆ ಪ್ರಕರಣದಲ್ಲಿ ಸಾಕ್ಷ್ಯ ನುಡಿಯುತ್ತೇನೆ .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.